IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಶಾಸಕ ಸಿದ್ಧಲಿಂಗಯ್ಯನವರ ಸದನ ಸಂವಾದ

–ಪ್ರೊ. ಪದ್ಮ ಟಿ.

ಸಹಾಯಕ ಪ್ರಾಧ್ಯಾಪಕಿ

ರಾಜ್ಯಶಾಸ್ತ್ರ ವಿಭಾಗ

ಸ.ಪ್ರ.ದ. ಕಾಲೇಜು, ಮಾಗಡಿ

ರಾಮನಗರ ಜಿಲ್ಲೆ

ಎರಡು ಸಾವಿರ ವರ್ಷಗಳ ಹಿಂದೆ ರಾಜ್ಯಶಾಸ್ತ್ರದ ಪಿತಾಮಹ ಅರಿಸ್ಟಾಟಲ್ ಕವಿಗಳನ್ನು ಕುರಿತು "ಅನಧಿಕೃತ ಶಾಸಕರು" ಎಂದು ಪ್ರಶಂಸಿಸುತ್ತಾನೆ. ಈ ಮಾತಿನ ಅಂತರಾತ್ಮವನ್ನು ಈಗ ಬದುಕುತ್ತಿರುವ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯು ಅರ್ಥಮಾಡಿಕೊಳ್ಳಬೇಕು. ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾದ ಲೋಕಸಭೆ ಹಾಗೂ ಕರ್ನಾಟಕದ ವಿಧಾನ ಮಂಡಲದ ಸದಸ್ಯರು ತಾವು ಪ್ರತಿನಿಧಿಸುವ ಪ್ರಜೆಗಳ ಪರವಾಗಿ ಸದನದ ಸಂವಾದಗಳಲ್ಲಿ ಭಾಗವಹಿಸಬೇಕು. ಶಾಸನ ಸಭೆಯ ಸದಸ್ಯರಾದವರು ಆ ಸಂವಾದದಲ್ಲಿ ಅಥವಾ ಚರ್ಚೆಯಲ್ಲಿ ಆಡಿದ ಮಾತುಗಳೇ ಮುಂದೆ ಶಾಸನಗಳಾಗುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು.

ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡ ಎಲ್ಲಾ ಕವಿಗಳಿಗೂ ಶಾಸಕರಾಗುವ ಅವಕಾಶ ಸಿಗುವುದಿಲ್ಲ. ಅವರು ಬರೆಯುವ ಕವಿತೆಯ ಸಾಲುಗಳಲ್ಲಿ ಪ್ರಜಾಹಿತಕ್ಕೆ ಬೇಕಾದ ಶಾಸನವೊಂದರ ರಚನೆಗೆ ಸೂಕ್ಷ್ಮ ವಿಚಾರಗಳಿರುತ್ತವೆ. ಜಗತ್ತಿನ ಯಾವುದೇ ಕವಿಯ ಕಾವ್ಯದ ಸಾಲುಗಳನ್ನು ನಾವು ಈ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಹುಟ್ಟು ಕವಿಯೊಬ್ಬನಿಗೆ ಶಾಸನಸಭೆಯ ಸದಸ್ಯನಾಗುವ ಅವಕಾಶ ದೊರೆತರೆ, ಅವನು ಆಡುವ ಪ್ರತಿಯೊಂದು ಮಾತು ಶಾಸನ ರಚನೆಗೆ ಬೇಕಾದ ಅಡಿಪಾಯವನ್ನು ಸೃಷ್ಟಿಸುತ್ತದೆ ಎಂಬುದನ್ನು ಮರೆಯಬಾರದು.

ಕನ್ನಡದ ಅನೇಕ ಕವಿಗಳು ಕರ್ನಾಟಕ ಶಾಸನ ಸಭೆಯ ಸದಸ್ಯರಾಗಿ ನೇಮಕಗೊಂಡಿದ್ದರು. ಡಿ.ವಿ. ಗುಂಡಪ್ಪ, ಬಸವರಾಜ್ ಕಟ್ಟೀಮನಿ, ಚಂದ್ರಶೇಖರ ಕಂಬಾರ, ಎಲ್. ಹನುಮಂತಯ್ಯ ಮುಂತಾದವರ ಉದಾಹರಣೆಗಳನ್ನು ನಾವು ಉಲ್ಲೇಖಿಸಬಹುದು. ಇವರ ಪೈಕಿ, ನಮ್ಮ ಕಾಲದ ಮಹತ್ವದ ಕವಿ ಡಾ. ಸಿದ್ಧಲಿಂಗಯ್ಯ ಕೂಡ ಎರಡು ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ನೇಮಕಗೊಂಡಿದ್ದರು. ಸಿದ್ಧಲಿಂಗಯ್ಯನವರ ಸದಸ್ಯತ್ವದ ಈ ಸಂದರ್ಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಒಂದು ಸಂಚಲನ ಏರ್ಪಟ್ಟಿತ್ತು ಎಂಬುದನ್ನು ನಾವು ಮರೆಯಬಾರದು. ಶಾಸನಸಭೆಯ ಸದಸ್ಯರಾಗಿ

ಸಿದ್ಧಲಿಂಗಯ್ಯನವರು ಸದನದಲ್ಲಿ ಪ್ರಸ್ತಾಪಿಸಿದ ವಿಷಯಗಳು, ಚರ್ಚೆ ಹಾಗೂ ಸಂವಾದಕ್ಕೆ ಸಿದ್ಧರಾದ ರೀತಿ, ಹನ್ನೆರಡು ವರ್ಷಗಳ ಕಾಲ ಅವರು ಅಲ್ಲಿ ಆಡಿದ ಮಾತುಗಳು ಅಧ್ಯಯನ ಯೋಗ್ಯವಾಗಿವೆ.

ಎಂಬತ್ತರ ದಶಕದಲ್ಲಿ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಕಾಂಗ್ರಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂತು. ಆ ಸರ್ಕಾರ ಅಧಿಕಾರ ಹಿಡಿಯಲು ಮುಖ್ಯ ಕಾರಣ ಕನ್ನಡ ಭಾಷೆಗೆ ಸಂಬಂಧಿಸಿದ ಗೋಕಾಕ್ ಚಳುವಳಿಯು ಸೇರಿದಂತೆ ಅನೇಕ ಕನ್ನಡ ಚಳುವಳಿಗಳು. ರೈತರ ಸಂಕಷ್ಟಗಳ ವಿರುದ್ಧ ನಡೆದ ರೈತ ಸಂಘಟನೆಯ ಅಸಂಖ್ಯಾತ ಹೋರಾಟಗಳು. ಮತ್ತೊಂದು ಸಾವಿರಾರು ವರ್ಷಗಳಿಂದ ಅನ್ಯಾಯ, ಅತ್ಯಾಚಾರ, ಅಸ್ಪೃಶ್ಯತೆಗಳಿಂದ ನಲುಗಿ ಹೋಗಿದ್ದ ದಲಿತರ ಪರವಾಗಿ ನಡೆದ ದಲಿತ ಸಂಘರ್ಷ ಸಮಿತಿಯ ಹೋರಾಟಗಳು, ಜೊತೆಗೆ ಲಂಕೇಶ್ ಪತ್ರಿಕೆಯಂತಹ ಕನ್ನಡಿಗರ ಆತ್ಮಾಭಿಮಾನವನ್ನು ಬಡಿದು ಎಚ್ಚರಿಸುವ ಪತ್ರಿಕೆಗಳು. ಈ ಎಲ್ಲಾ ಸಾಂಘಿಕ ಹೋರಾಟಗಳ ಪ್ರತಿಫಲವಾಗಿ ಜನತಾಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿತು. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಗಳಾದರು. ಹೆಗಡೆಯವರು ತಮ್ಮ ಆಡಳಿತಕ್ಕೆ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಪ್ರತಿರೋಧಗಳನ್ನು ತಣ್ಣಗೆ ಮಾಡುವ ತಂತ್ರವಾಗಿಯೋ, ಅಥವಾ ಕನ್ನಡ ನಾಡಿನ ಪ್ರತಿಭಾವಂತ ಹೋರಾಟಗಾರರನ್ನು, ಸಾಹಿತಿಗಳನ್ನು, ಕಲಾವಿದರನ್ನು ಪ್ರೋತ್ಸಾಹಿಸಿ, ಅವರ ಮೂಲಕ ಪ್ರಜೆಗಳ ಪರವಾಗಿ ಹೊಸ ಸಂವೇದನೆಗಳನ್ನು ಸೃಷ್ಟಿಸುವ ಕಾರಣದಿಂದಲೋ ವಿಧಾನ ಪರಿಷತ್ತಿನ ಸದಸ್ಯತ್ವವೂ ಸೇರಿದ ಹಾಗೆ ಪ್ರಭುತ್ವದ ಹಲವು ಅಧಿಕಾರ ಹಾಗೂ ಸ್ಥಾನಮಾನಗಳಿಗೆ ಪ್ರತಿಭಾವಂತರನ್ನು ಬಹುಶಃ ನೇಮಕ ಮಾಡಿಕೊಂಡಿದ್ದರು. ಆಗ ಅವರ ಕಣ್ಣಿಗೆ ಬಿದ್ದದ್ದೆ ಆ ಕಾಲದ ಪ್ರಖ್ಯಾತ ಬಂಡಾಯ ಹಾಗೂ ದಲಿತ ಸಾಹಿತಿ ಡಾ. ಸಿದ್ಧಲಿಂಗಯ್ಯ.

ಹೀಗೆ ಸಿದ್ಧಲಿಂಗಯ್ಯನವರಿಗೆ ವಿಧಾನ ಪರಿಷತ್ತಿನ ಸದಸ್ಯರಾಗುವ ಸುಯೋಗ ಒದಗಿ ಬಂತು. ಅಸ್ಪೃಶ್ಯ ಸಮಾಜದಲ್ಲಿ ಹುಟ್ಟಿ ಬಂದಿದ್ದ ಸಿದ್ಧಲಿಂಗಯ್ಯ ಆ ಜನಗಳ ಪರಂಪರಾಗತ ನೋವನ್ನು ಸ್ವತಃ ಅನುಭವಿಸಿದ್ದರು. ಅವರ ಸ್ವಾನುಭವದ ಸಂಕಟ ಲೋಕದ ಸಾಕ್ಷಿಗಳಾಗಿ ಅವರ ಊರುಕೇರಿ ಆತ್ಮಕಥನವನ್ನು ಓದಿದಾಗ ನಮಗೆ ದೊರೆಯುತ್ತವೆ. ಸಾಮಾಜಿಕ ಅಸಮಾನತೆ, ಆರ್ಥಿಕ ಸಂಕಷ್ಟ, ಹಸಿವು, ಅವಮಾನವು ಅವರನ್ನು ಬಾಲ್ಯದಿಂದಲೂ ಕಾಡಿದ್ದವು. ವಿದ್ಯಾರ್ಥಿಯಾಗಿದ್ದಾಗಲೇ ಬಸವಲಿಂಗಪ್ಪನವರ ಬೂಸಾ ಚಳುವಳಿಗೆ ಬೆಂಬಲವಾಗಿ ನಿಂತು, ಹಲವಾರು ಸಮಸ್ಯೆಗಳನ್ನು ಎದುರಿಸಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದ ನಂತರವೂ ದಲಿತ ಸಂಘರ್ಷ ಸಮಿತಿಯ ಹಲವಾರು ಹೋರಾಟಗಳಲ್ಲಿ ಹಗಲು ರಾತ್ರಿ ಎನ್ನದೆ ಭಾಗವಹಿಸುತ್ತಿದ್ದರು. ಆ ಹೊತ್ತಿಗಾಗಲೇ 'ಹೊಲೆಮಾದಿಗರ ಹಾಡು' ಎನ್ನುವ ಕವನ ಸಂಕಲನದಿಂದ ಕವಿಯಾಗಿ ಪ್ರಸಿದ್ಧರಾಗಿದ್ದರು. ಅವರು ರಚಿಸಿದ ಹಾಡುಗಳು ಕನ್ನಡಿಗರಲ್ಲಿ ಹೋರಾಟದ ಕಿಚ್ಚನ್ನು ಹಚ್ಚಿದ್ದವು. ಒಂದು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಕಾವ್ಯಕ್ಕೆ ಹೊಸ ರೊಚ್ಚನ್ನು ಹಾಗೂ ವಿನೂತನ ಸಂವೇದನೆಯನ್ನು ಸಿದ್ಧಲಿಂಗಯ್ಯ ಸೃಷ್ಟಿಸಿಕೊಟ್ಟಿದ್ದರು. ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ್ದ ಚಾಣಾಕ್ಷ ರಾಜಕಾರಣಿ ರಾಮಕೃಷ್ಣ ಹೆಗಡೆಯವರಿಗೆ ಸಿದ್ಧಲಿಂಗಯ್ಯನವರನ್ನು ವಿಧಾನಪರಿಷತ್ತಿನ ಸದಸ್ಯರನ್ನಾಗಿ ಆಯ್ಕೆ ಮಾಡುವುದು ಅನಿವಾರ್ಯವಾಗಿತ್ತು.

ಈ ಕಾರಣಗಳು ಏನೇ ಇರಲಿ, ಸಿದ್ಧಲಿಂಗಯ್ಯನವರು ವಿಧಾನ ಪರಿಷತ್ತಿನ ಸದಸ್ಯರಾಗಿ ಪ್ರವೇಶ ಪಡೆದ ತರುವಾಯ, ಯಾವ ರೀತಿಯ ಸಮಸ್ಯೆಗಳತ್ತ ಗಮನಹರಿಸಿ, ಸದನ ಸಂವಾದದಲ್ಲಿ ಭಾಗವಹಿಸಿದರು ಎಂಬುದನ್ನು ನಾವೀಗ ಚರ್ಚಿಸಬೇಕಾಗಿದೆ.

ಡಾ. ಸಿದ್ಧಲಿಂಗಯ್ಯನವರ ಸದನ ಸಂವಾದಗಳನ್ನು ಗ್ರಂಥ ರೂಪದಲ್ಲಿ ಸಂಪಾದಿಸಿ ಕೊಟ್ಟವರು ಅವರ ಶಿಷ್ಯ ಹಾಗೂ ಪತ್ರಕರ್ತ ದೊಡ್ಡಹುಲ್ಲೂರು ರುಕ್ಕೋಜಿ ಅವರು. ಸಿದ್ಧಲಿಂಗಯ್ಯನವರ ಸದನದಲ್ಲಿನ ನಡಾವಳಿಗಳನ್ನು ರುಕ್ಕೋಜಿ ಮೂರು ಸಂಪುಟಗಳಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ.

1. ಸದನದಲ್ಲಿ ಸಿದ್ಧಲಿಂಗಯ್ಯ
2. ಡಾ. ಸಿದ್ಧಲಿಂಗಯ್ಯನವರ ಸದನದ ಭಾಷಣಗಳು **(ಸಂಪುಟ– 1)**
3. ಡಾ. ಸಿದ್ಧಲಿಂಗಯ್ಯನವರ ಸದನದ ಭಾಷಣಗಳು **(ಸಂಪುಟ– 2)**

ಎಂಬ ಮೂರು ಸಂಪುಟಗಳು ಹೀಗಾಗಲೇ ಪ್ರಕಟಗೊಂಡಿವೆ. ಈ ಸಂಪುಟಗಳಲ್ಲಿ ಅವರ ಕೆಲವು ಭಾಷಣಗಳು ಪುನರಾವರ್ತನೆಗೊಂಡಿವೆ. ಈ ಭಾಷಣಗಳು ಕನ್ನಡ ಓದುಗರ ಹಾಗೂ ರಾಜ್ಯಶಾಸ್ತ್ರ ವಿದ್ಯಾರ್ಥಿಗಳ ಅಧ್ಯಯನಕ್ಕೆ ಮಹತ್ವಪೂರ್ಣ ಆಕರಗಳಾಗಿವೆ. ಸಿದ್ಧಲಿಂಗಯ್ಯನವರು ಅಂತರ್ಜಾತಿ ವಿವಾಹಿತರ ಸಮಸ್ಯೆಗಳು ಸೇರಿದಂತೆ, ಅನೇಕ ಮಹತ್ವಪೂರ್ಣ ವಿಷಯಗಳ ಬಗ್ಗೆ ಸಂವಾದ ನಡೆಸಿದ್ದಾರೆ. ಅವರ ಚರ್ಚೆ ಮತ್ತು ಸಂವಾದಗಳೊಂದಿಗೆ ಆ ಸಂದರ್ಭದ ಎಲ್ಲಾ ಪಕ್ಷಗಳ ಸದಸ್ಯರು ದನಿಗೂಡಿಸಿರುವುದು ಗಮನಾರ್ಹ. ಸರ್ಕಾರ ಇವರ ಗಮನ ಸೆಳೆಯುವ ಚರ್ಚೆಗಳ ಬಗ್ಗೆ ಕಣ್ಣು, ಕಿವಿಗಳನ್ನು ತೆರೆದು ಆಲಿಸುತ್ತಿತ್ತು. ಅಲ್ಲದೇ, ನಂತರದ ದಿನಗಳಲ್ಲಿ ಇವರು ಎತ್ತಿದ ಸಮಸ್ಯೆಗಳಿಗೆ ಪರಿಹಾರವಾಗಿ ಶಾಸನಗಳನ್ನು ರೂಪಿಸಿತು. ಕವಿ ಸಿದ್ಧಲಿಂಗಯ್ಯನವರು ವಿಧಾನ ಪರಿಷತ್ತಿನ ಸದಸ್ಯರಾದ ಸಾರ್ಥಕತೆಯನ್ನು ನಾವು ಈ ಸಂವಾದಗಳ ಮೂಲಕ ಗಮನಿಸಬಹುದಾಗಿದೆ.

ನಮ್ಮ ರಾಜ್ಯದಲ್ಲಿ ಅಂತರ್ಜಾತಿ ವಿವಾಹ ಆದವರಿಗೆ ಮತ್ತು ಅವರ ಮಕ್ಕಳಿಗೆ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಶೇ. 5ರಷ್ಟು ಮೀಸಲಾತಿ ನಿಯಮವನ್ನು ಜಾರಿಗೆ ತರಬೇಕು ಎಂದು ಸದನದ ಪರವಾಗಿ ಡಾ. ಸಿದ್ಧಲಿಂಗಯ್ಯನವರು ಶಿಫಾರಸ್ಸು ಮಾಡುತ್ತಾರೆ. ಈ ಹೋರಾಟವನ್ನು ನಾಡಿನ ಖ್ಯಾತ ಸಾಹಿತಿಗಳು, ವಿಚಾರವಾದಿಗಳೂ ಆದ ಪೂರ್ಣಚಂದ್ರ ತೇಜಸ್ವಿ ಅವರು ಬೆಂಬಲಿಸುತ್ತಾರೆ. ಅಷ್ಟೇ ಅಲ್ಲದೇ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಈ ಹೋರಾಟವು ಪ್ರಕಟವಾಗುತ್ತದೆ.

1999 ಮಾರ್ಚ್‌ನಲ್ಲಿ ಚರ್ಚಿಸಿದ ವಿಷಯ 'ಅಜಲು ಪದ್ಧತಿ'. ಅಂದಿನ ಸಭಾಪತಿಗಳಿಗೆ ಡಾ. ಸಿದ್ಧಲಿಂಗಯ್ಯನವರು ಹಾಕಿದ ಪ್ರಶ್ನೆ ಎಂದರೆ 'ನಮ್ಮ ಸಮಾಜದಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಅಥವಾ ಕಟ್ಟಕಡೆಯ ಸ್ಥಾನದಲ್ಲಿ ಬದುಕುತ್ತಿರುವವರು ಕೊರಗ ಜನಾಂಗದವರು. ಮೇಲ್ವರ್ಗದ ಜನರಿಗೆ ರೋಗ ಬಂದರೆ, ಅವರ ಉಗುರು ಮತ್ತು ಕೂದಲನ್ನು ಕತ್ತರಿಸಿ ಅನ್ನದಲ್ಲಿ ಹಾಕಿ ಕಲಸಿ, ಅದನ್ನು ತಿನ್ನಲು ಕೊರಗ ಜನಾಂಗದ ವ್ಯಕ್ತಿಗಳಿಗೆ ನೀಡುತ್ತಿದ್ದರು. ಆ ಅನ್ನವನ್ನು ಕೊರಗರು ತಿಂದರೆ, ಇವರ ರೋಗವಾಸಿಯಾಗುವುದು ಎಂಬ ನಂಬಿಕೆ ಮೇಲ್ವರ್ಗದವರದ್ದಾಗಿತ್ತು. ಇದನ್ನು 'ಅಜಲು ಪದ್ಧತಿ' ಎನ್ನುತ್ತಿದ್ದರು. ಈ ಪದ್ಧತಿ ಸಮಾಜದಲ್ಲಿ ಇಂದಿಗೂ ನಡೆಸಿಕೊಂಡು ಬರಲಾಗುತ್ತಿದೆ. ಇದರಿಂದ ಕೊರಗ ಜನರಿಗೆ ರಕ್ಷಣೆ ಇಲ್ಲವೇ? ಕೊರಗ ಜನಾಂಗದ ಯುವಕರಿಗೆ ಉದ್ಯೋಗ ಏಕೆ ಕೊಡುತ್ತಿಲ್ಲ? ಅವರಿಗೆ ಎಷ್ಟು ಆರ್ಥಿಕವಾಗಿ ಸಹಾಯ ಮಾಡಿದ್ದಿರಿ? ಅವರಿಗೆ ಜೀವನ ನಡೆಸಲು ಆಟೋಗಳನ್ನು ಯಾಕೆ ಕೊಡಿಸಿಲ್ಲ? ಹಾಗೂ ಆಟೋ ಓಡಿಸುವ ತರಬೇತಿಯನ್ನು ಎಷ್ಟು ಕೊರಗ ಜನರಿಗೆ ಕೊಟ್ಟಿದ್ದೀರಿ? ಇವರಿಗಾಗಿ 1996–97ನೇ ಸಾಲಿನಲ್ಲಿ 74 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರೂ, ನಾವು (ಸರ್ಕಾರದವರು) ಖರ್ಚು ಮಾಡಿರುವುದು ಕೇವಲ 53 ಲಕ್ಷ ರೂಪಾಯಿಗಳು ಮಾತ್ರ. ಇದಕ್ಕೆ ಕಾರಣ ಏನು? ಇತ್ಯಾದಿ ಪ್ರಶ್ನೆಗಳನ್ನು ಕೊರಗ ಸಮುದಾಯದ ಪರವಾಗಿ ಸರ್ಕಾರಕ್ಕೆ ಕೇಳಿದ್ದಾರೆ.

ಹಾಗೆಯೇ ಕಾಡು ಪ್ರಾಣಿಗಳಿಗಿಂತಲೂ ಹೀನವಾಗಿ ಕಲ್ಲು, ಮಣ್ಣು ತಿಂದು ಬದುಕುವಂತಹ 'ಇಲ್ಲಿಗರು' ಎಂಬ ಆದಿವಾಸಿ ಜನರ ಪರವಾಗಿ, ಕಿರುಕುಳದಿಂದ ಬಸವಳಿದಿರುವ 'ಕಣಿ'ಯವರನ್ನು, ಗಿರಿಜನರ ಬದುಕಿನ ಬಗ್ಗೆ ಅಪಾರವಾದ ಮಾನವೀಯ ಅನುಕಂಪದಿಂದ ವಿಧಾನ ಪರಿಷತ್ತಿನಲ್ಲಿ ಸಿದ್ಧಲಿಂಗಯ್ಯನವರು ಮಾತನಾಡುವ ಮೂಲಕ ಆ ಎಲ್ಲ ಜನಾಂಗಗಳ ಕಷ್ಟಗಳನ್ನು ಸಮಾಜದ  ಹಾಗೂ ಸರ್ಕಾರದ ಕಣ್ಣಿಗೆ ತೆರೆದು ತೋರಿಸಿದ್ದಾರೆ. ಹಾಗೂ ಆ ಜನಗಳ ಸಂಕಷ್ಟಕ್ಕಾಗಿ ಮಿಡಿದಿದ್ದಾರೆ. ಅಲ್ಲದೇ, ಸರ್ಕಾರವು ಆ ಜನಾಂಗದವರಿಗೆ ಆರ್ಥಿಕ ಸಹಾಯ ಮಾಡುವಂತೆ ಎಚ್ಚರಿಸಿದ್ದಾರೆ.

ಆಗಸ್ಟ್ 1994ರಲ್ಲಿ ಕನಕಪುರ ತಾಲ್ಲೂಕಿನ ಹರಳಾಳು ಗ್ರಾಮದಲ್ಲಿ ದಲಿತರ ಮೇಲೆ ನಡೆದ ಹಲ್ಲೆಯ ಪ್ರಕರಣದ ಬಗ್ಗೆ ಸದನದಲ್ಲಿ ಸಿದ್ಧಲಿಂಗಯ್ಯನವರು ಧ್ವನಿ ಎತ್ತುತ್ತಾರೆ. "ಭಾರತವು ಜಾತ್ಯತೀತ ರಾಷ್ಟ್ರ ಇಲ್ಲಿ ಸ್ವಾತಂತ್ರ್ಯ, ಸಮಾನತೆಗಳಿವೆ. ಅದರಲ್ಲೂ ಪರಿಶಿಷ್ಟರಿಗೆ ಕೆಲವೊಂದು ವಿಶೇಷ ಹಕ್ಕುಗಳು ಇವೆ. ಆದರೆ ಇವೆಲ್ಲಾ ಕೇವಲ ಕಾಗದದ ಮೇಲಿವೆಯೇನೋ ಎನಿಸುತ್ತಿದೆ ಎಂದು ನೊಂದು ಸಿದ್ಧಲಿಂಗಯ್ಯನವರು ಹೇಳುತ್ತಾರೆ.

ಹರಳಾಳು ಗ್ರಾಮದಲ್ಲಿ ದಲಿತರ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ, ಪೊಲೀಸ್ ಅಧಿಕಾರಿಯೊಬ್ಬರು "ದಲಿತರು ಜೈಲಿನಲ್ಲಿರುವುದೇ ಸೂಕ್ತ. ಹೊರಗಿದ್ದರೆ ರಕ್ಷಣೆ ಸಿಗಲಾರದು" ಎಂದು ವರದಿ ನೀಡಿದ್ದಾರೆ. ಇದು ಸಮಾನತೆಯ ಹಕ್ಕು ಮತ್ತು ಸಂರಕ್ಷಣೆಗೆ ಎಷ್ಟು ಸೂಕ್ತವಾದದ್ದು ಎಂದು ಸರ್ಕಾರಕ್ಕೆ ಪ್ರಶ್ನಿಸಿದ್ದಾರೆ. ಈ ಘಟನೆಯು ನಮ್ಮ ಹಳ್ಳಿಗಳಲ್ಲಿ ಇನ್ನೂ ಹೇಗೆ ದಲಿತರು ಜೀವ ಕೈಯಲ್ಲಿ ಹಿಡಿದು ಬದುಕುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂಬುದು ಸಿದ್ಧಲಿಂಗಯ್ಯನವರ ಅಂದಿನ ಸದನದ ವಾದವಾಗಿತ್ತು. ಇದರ ಮೂಲಕ ಸಂವಿಧಾನದ ಪೀಠಿಕೆಯ ಅಂಶವಾದ "ಜಾತ್ಯತೀತ ಪ್ರಜ್ಞೆ"ಯನ್ನು ಎತ್ತಿ ಹಿಡಿದಿದ್ದಾರೆ.

ದೇಶದ ಸ್ವಾತಂತ್ರ್ಯದ ಬಗ್ಗೆ ಸಿದ್ಧಲಿಂಗಯ್ಯನವರು ತಮ್ಮದೇ ಆದ ವ್ಯಾಖ್ಯಾನಗಳನ್ನು **ಯಾರಿಗೆ ಬಂತು, ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ** ಎನ್ನುವ ಕವಿತೆ ರಚಿಸುವ ಮೂಲಕ ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಪರಿಶಿಷ್ಟ ಜಾತಿಯ ಪ್ರತಿಭಾವಂತರ ನೇರ ನೇಮಕಾತಿ ಆಗುತ್ತಿಲ್ಲ ಎಂದು 1992ರಲ್ಲಿ ಸದನದಲ್ಲಿ ದನಿ ಎತ್ತುತ್ತಾರೆ.

ವಾಸ್ತವವಾಗಿ ಪರಿಶಿಷ್ಟರ ಬದುಕು ದಿನೇ ದಿನೇ ಹದಗೆಡುತ್ತಿದ್ದರೂ ಸಮಾಜದ ಇನ್ನಿತರೆ ಬಡವರ ದೃಷ್ಟಿಯಲ್ಲಿ ಎಲ್ಲಾ ಸವಲತ್ತುಗಳನ್ನು ದಲಿತರೇ ಕಬಳಿಸಿಕೊಳ್ಳುತ್ತಿದ್ದಾರೆ ಎಂಬ ಭಾವನೆ ತಲೆದೋರಿದೆ. ಆದರೆ ಪ್ರತಿಭಾವಂತ ದಲಿತರನ್ನು ಸರ್ಕಾರಿ ಹುದ್ದೆಗಳಿಗೆ ನೇರವಾಗಿ ಸ್ಥಾನ ಭರ್ತಿ ಮಾಡಿಕೊಳ್ಳುತ್ತಿಲ್ಲ. ದಲಿತ ಪ್ರತಿಭಾವಂತರ 'ನೇರ ನೇಮಕಾತಿ' ವಿಧಾನ ಸರ್ಕಾರದಲ್ಲಿ ಇದ್ದರೂ ಸಹ ಇದುವರೆಗೂ ಕೇವಲ ಮೂರು ಮಂದಿಗೆ ಮಾತ್ರ ಅವಕಾಶ ದೊರೆತಿದೆ ಎಂಬ ಅಸಮಾಧಾನವನ್ನು ಕವಿ ಸದನದಲ್ಲಿ ವ್ಯಕ್ತಪಡಿಸುತ್ತಾರೆ. ಅದಕ್ಕೆ ಅಂದಿನ ಸರ್ಕಾರವು ಸ್ಪಂದಿಸುತ್ತದೆ. ಇದರ ಬಗ್ಗೆ ಮತ್ತು ಮೀಸಲಾತಿ ಕುರಿತಂತೆ ಸುಪ್ರೀಂಕೋರ್ಟ್ ತೀರ್ಪು, ಇವೆರಡು ಅಂದಿನ ಸದನದ ಬಹಳ ಮುಖ್ಯವಾದ ವಿಚಾರಗಳಾಗಿದ್ದವು. ಇದು ಸಿದ್ಧಲಿಂಗಯ್ಯನವರ ಜನಪರ ಕಾಳಜಿಗೆ ಸಂಬಧಿಸಿದ ವಿಷಯಗಳಾಗಿವೆ.

20–06–1990ರಲ್ಲಿ 'ಕನ್ನಡ ಭಾಷೆಯ' ಬಗ್ಗೆ ಸಿದ್ಧಲಿಂಗಯ್ಯನವರು ಬಹುದೊಡ್ಡ ಚರ್ಚೆಯನ್ನು  ಮಂಡಿಸುತ್ತಾರೆ. ಕನ್ನಡ ಆಡಳಿತ ಭಾಷೆಯಾಗಬೇಕು ಎಂಬ ವಾದವನ್ನು ಅಂದಿನ ಸದನದಲ್ಲಿ ಮೂರು ಭಾಷಣಗಳ ಮೂಲಕ ವಿವರವಾಗಿ ಸಿದ್ಧಲಿಂಗಯ್ಯನವರು ಮಂಡಿಸಿದ್ದಾರೆ.

ಒಂದು ಬಜೆಟ್ ಚರ್ಚೆ, ಮತ್ತೊಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಸೂದೆಯಲ್ಲಿ ವಿಶ್ಲೇಷಣೆಯಾದ ಕನ್ನಡದ ಸ್ಥಿತಿಗತಿ, ಮಗದೊಂದು ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯ ನೀತಿ ನಿರೂಪಣೆ. ಈ ಮೂರು ಭಾಗಗಳಲ್ಲಿ ಸಾವಿರಾರು ವರ್ಷಗಳಷ್ಟು ಹಿಂದಿನ ಸಾಹಿತ್ಯಕ, ಸಾಂಸ್ಕೃತಿಕ ಹಿನ್ನೆಲೆ ಇರುವ, ಅತ್ಯಂತ ಸಮೃದ್ಧತೆಯಿಂದ ಕೂಡಿರುವ 'ಕನ್ನಡ ಭಾಷೆ' ಹೇಗೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂಬುದನ್ನು ಸಿದ್ಧಲಿಂಗಯ್ಯನವರು ವಿವರಿಸಿದ್ದಾರೆ. ಈ ಭಾಷಣಗಳಲ್ಲಿ ಕವಿ ಸಿದ್ಧಲಿಂಗಯ್ಯನವರ ಕನ್ನಡ ನಾಡು–ನುಡಿ ಪ್ರೇಮವು ದಟ್ಟವಾಗಿ ವ್ಯಕ್ತಗೊಂಡಿದೆ. ಕನ್ನಡ ಭಾಷಿಕ ಸಮುದಾಯ ಎದುರಿಸುತ್ತಿರುವ ಸಮಸ್ಯೆ ಸವಾಲುಗಳಿಗೆ, ಸೂಕ್ತ ಪರಿಹಾರವನ್ನು ಕಂಡುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಏರಿರುವುದನ್ನು ಸದರಿ ಸಂವಾದಗಳಲ್ಲಿ ಗಮನಿಸಬಹುದಾಗಿದೆ.

ಕನ್ನಡ ಭಾಷೆಯ ತಬ್ಬಲಿತನದ ಬಗ್ಗೆ ಸಿದ್ಧಲಿಂಗಯ್ಯ ವಿವರವಾಗಿ ಚರ್ಚಿಸಿದ್ದಾರೆ. ರಾಜ್ಯಪಾಲರ ಭಾಷಣ ಹಾಗೂ ಸರ್ಕಾರದ ಮುಂಗಡ ಪತ್ರದಲ್ಲಿ ಕನ್ನಡ ಅಭಿವೃದ್ಧಿ ಕುರಿತಂತೆ ಸರ್ಕಾರ ಯೋಜನೆಗಳನ್ನು ರೂಪಿಸುವುದಾಗಿ ಒಪ್ಪಿಕೊಂಡಿರುತ್ತದೆ. ದುರದೃಷ್ಟವೆಂದರೆ, ನಂತರದ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಯಾವುದೇ ಪ್ರೋತ್ಸಾಹದಾಯಕ ವಾತಾವರಣ ಸಿಕ್ಕದಿರುವ ಬಗ್ಗೆ ಶಾಸಕ ಸಿದ್ಧಲಿಂಗಯ್ಯ ಕಠೋರವಾಗಿ ಟೀಕಿಸುತ್ತಾರೆ. ಕರ್ನಾಟಕ ಸರ್ಕಾರವು ಪ್ರಕಟಿಸುವ ಕಾಗದ ಪತ್ರಗಳು, ಸುತ್ತೋಲೆಗಳು, ಆದೇಶದ ಪ್ರತಿಗಳು ಇಂಗ್ಲಿಷ್‌ನಲ್ಲೇ ಬರುತ್ತಿವೆ. ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ಕೂಡ ಶೇ. 80ರಷ್ಟು ಇಂಗ್ಲಿಷ್ ಭಾಷೆಯಲ್ಲೇ ಮುದ್ರಣಗೊಳ್ಳುತ್ತಿವೆ. ಅಷ್ಟೇ ಅಲ್ಲದೆ ಕೇಂದ್ರ ಸರ್ಕಾರಿ ನೌಕರರು ತಮ್ಮ ಕಛೇರಿಗಳಲ್ಲಿ ಇಂಗ್ಲಿಷನ್ನೇ ಬಳಸುತ್ತಿದ್ದಾರೆ. ಅಂಚೆ ಕಛೇರಿಯು ಸೇರಿದಂತೆ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಕನ್ನಡವನ್ನು ನಿರ್ಲ್ಯಕ್ಷ್ಯ ಮಾಡಲಾಗುತ್ತಿದೆ. ಅಂಚೆ ಕಛೇರಿಯಲ್ಲಿ ಕನ್ನಡದಲ್ಲಿ ಏನನ್ನಾದರೂ ಬರೆದುಕೊಟ್ಟರೆ ಅವರು 'ನಮಗೆ ಕನ್ನಡ ಬರುವುದಿಲ್ಲ. ಇಂಗ್ಲಿಷ್‌ನಲ್ಲಿ ಬರೆದುಕೊಡಿ' ಎನ್ನುತ್ತಾರೆ. ಕನ್ನಡಿಗರು ಅಜ್ಞಾನಿಗಳು, ದಡ್ಡರು ಅನ್ನೋ ಅರ್ಥದಲ್ಲಿ ಬಿಂಬಿತವಾಗುತ್ತಿದೆ. ಇಂಗ್ಲಿಷ್ ಬಲ್ಲವನು ಮಾತ್ರವೇ ಜ್ಞಾನಿ, ಅಕ್ಷರಸ್ಥ ಅನ್ನುವಂತಾಗಿದೆ. ದಯವಿಟ್ಟು ಸರ್ಕಾರ ಇದರ ಕಡೆ ಗಮನಹರಿಸಬೇಕು ಎಂದು ಬಹಳ ನೋವಿನಿಂದ ಸದನದಲ್ಲಿ ಅಂದು ಸಿದ್ಧಲಿಂಗಯ್ಯನವರು ಮಾತನಾಡುತ್ತಾರೆ. ಕನ್ನಡ ಪರವಾದ ಈ ಚರ್ಚೆಗಳನ್ನು ಮುಂದುವರಿಸಲು ಸಿದ್ಧಲಿಂಗಯ್ಯನವರು ಕುವೆಂಪು ಅವರಂತಹ ಮಹಾಕವಿಯ ಪದ್ಯವನ್ನು ಅಲ್ಲಲ್ಲಿ ಉಲ್ಲೇಖಿಸುತ್ತಾರೆ.

ಉದಾ : **ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರಾ...**

ಬಿಹಾರದ ಮುಖ್ಯಮಂತ್ರಿಯಾಗಿದ್ದ ಕರ್ಪೂರಿ ಠಾಕೂರ್ ಅವರು ಅಲ್ಲಿಯ ಅಧಿಕಾರಿಗಳು ಇಂಗ್ಲಿಷ್‌ನಲ್ಲಿ ಟಿಪ್ಪಣಿ ಹಾಕಿದ್ದರು ಎಂದು 27 ಜನ ಅಧಿಕಾರಿಗಳನ್ನು ಒಂದೇ ದಿನ ಸಸ್ಪೆಂಡ್ ಮಾಡಿದರು ಎನ್ನುವ ಉದಾಹರಣೆ ಕೊಡುವ ಮೂಲಕ ಸರ್ಕಾರವನ್ನು ಎಚ್ಚರಿಸುತ್ತಾರೆ.

ಆಂಗ್ಲರ ಆಡಳಿತದಲ್ಲೂ ಕನ್ನಡ ಭಾಷೆ ಇತ್ತು ಎಂಬುದನ್ನು ಅಂದು ಸದನದಲ್ಲಿ ಸಿದ್ಧಲಿಂಗಯ್ಯನವರು ವಿವರಿಸುತ್ತಾರೆ. 1867ರಲ್ಲಿ 'ಕ್ಲಾರ್ಕ್' ಎಂಬ ಮುಖ್ಯ ನ್ಯಾಯಾಧೀಶನು **ತನ್ನ ವಿಭಾಗದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ಯಾವ ತೊಂದರೆಯೂ ಇಲ್ಲ ಹಾಗೂ ತನ್ನ ಕಛೇರಿಯಲ್ಲಿನ ವ್ಯವಹಾರದಲ್ಲಿ ಕನ್ನಡ ಬಳಸಲಿಕ್ಕೆ ಸಮರ್ಥರಾದ ಸಿಬ್ಬಂದಿ ಕೂಡ ಇದೆ** ಎಂದು ಹೇಳಿದ್ದನು. ಇದನ್ನು ಆ ಇಂಗ್ಲಿಷ್ ನ್ಯಾಯಾಧೀಶನು 1867ರ ವರದಿಯಲ್ಲಿ ಬರೆದಿದ್ದಾನೆ. ಕನ್ನಡದಲ್ಲಿ ಇಲ್ಲಿನ ಅರ್ಜಿಗಳನ್ನು ತಿರಸ್ಕರಿಸಿ ಅದನ್ನು ಸರ್ಕಾರ ಅಂಗೀಕಾರ ಮಾಡಬಾರದು ಎಂದು ಆದೇಶ ಹೊರಡಿಸಿದ್ದನು. ನಿಜಕ್ಕೂ ಇದೊಂದು ಕ್ರಾಂತಿಕಾರಿ ಆದೇಶವಾಗಿತ್ತು ಎಂದು ಸಿದ್ಧಲಿಂಗಯ್ಯನವರು ಕನ್ನಡ ಭಾಷೆಯ ಬಗ್ಗೆ ಈಗಿನ ಸರ್ಕಾರ ಏನು ಮಾಡುತ್ತಿದೆ ಎಂಬ

ಪ್ರಶ್ನೆಯನ್ನು ಎತ್ತುತ್ತಾರೆ. ಅವರ ಈ ಮಾತಿಗೆ ಪೂರಕವಾಗಿ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾರೆ. **ಸಿದ್ಧಲಿಂಗಯ್ಯನವರು ಎತ್ತಿರುವ ಈ ಪ್ರಶ್ನೆ ಬಹಳ ಮುಖ್ಯವಾದದ್ದು ಹಾಗೂ ನಮ್ಮಗಳ ಅಭಿಪ್ರಾಯವು ಇದೆ ಆಗಿದೆ. ಆಡಳಿತದಲ್ಲಿ ಕನ್ನಡ ಭಾಷೆಯನ್ನು ತರಬೇಕು** ಎಂಬ ಸ್ಪಷ್ಟವಾದ ಅಭಿಪ್ರಾಯವನ್ನು ಕೊಡುತ್ತಾರೆ.

ಹಾಗೆಯೇ ಈ ಪ್ರಶ್ನೆಗೆ ಬಿ.ಟಿ. ಲಲಿತಾನಾಯಕ್ ಅವರು ದ್ವನಿಗೂಡಿಸುತ್ತಾರೆ. ಅಂದಿನ ಸದನದಲ್ಲಿದ್ದ ಕವಿ ಡಾ. ಎಂ. ಅಕ್ಬರ್ ಆಲಿ, ಎನ್. ತಿಪ್ಪಣ್ಣ, ಟಿ.ಎನ್. ನರಸಿಂಹಮೂರ್ತಿ, ಎಂ. ಸತ್ಯನಾರಾಯಣರಾವ್ ಇವರೆಲ್ಲರೂ ಸಿದ್ಧಲಿಂಗಯ್ಯನವರ ಪರವಾಗಿ ವಾದ ಮಂಡಿಸುತ್ತಾರೆ. ಸಿದ್ಧಲಿಂಗಯ್ಯನವರಿಗಿದ್ದ ಕನ್ನಡ ಭಾಷೆಯ ಮೇಲಿನ ಅಭಿಮಾನ, ಗೌರವ ಹಾಗೂ ಕಾಳಜಿಯನ್ನು ಇದು ಸೂಚಿಸುತ್ತದೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸಲು ಅವರು ತೋರಿದ ಶ್ರಮವನ್ನು ನಾವು ಇಲ್ಲಿ ಗಮನಿಸಬೇಕಾಗಿದೆ.

ಖಾಸಗಿ ಕಾರ್ಖಾನೆಯಲ್ಲಿ ಕಾರ್ಮಿಕರು ಪಡುತ್ತಿರುವ ಬವಣೆಯ ಬಗ್ಗೆ ಸಿದ್ಧಲಿಂಗಯ್ಯನವರು ದನಿ ಎತ್ತುತ್ತಾರೆ. ಕಾನೂನಿನ ಚೌಕಟ್ಟಿನಲ್ಲಿ ಕೈಗಾರಿಕೆಗಳಿಗೆ ಸಿಗಬಹುದಾದ ಸಕಲ ಸವಲತ್ತುಗಳೂ ಮಾಲೀಕರ ಪಾಲಾಗುತ್ತಿವೆ. ಅನೇಕ ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿ ಮಾಡಿಲ್ಲ. ಮೂಲಭೂತ ಸೌಲಭ್ಯಗಳಾದ ವೈದ್ಯಕೀಯ ಸೌಲಭ್ಯ, ಭವಿಷ್ಯನಿಧಿ, ಸುರಕ್ಷಣಾ ವ್ಯವಸ್ಥೆ, ಸಮವಸ್ತ್ರ, ರಿಯಾಯಿತಿ ದರದಲ್ಲಿ ಉಪಹಾರ, ಕುಡಿಯುವ ನೀರಿನ ಸೌಲಭ್ಯ ಇತ್ಯಾದಿಗಳು ಕಾರ್ಮಿಕರಿಗೆ ಸಿಗುತ್ತಿಲ್ಲ. ಸರ್ಕಾರದ "ಕಾರ್ಖಾನೆ ಕಾಯಿದೆ" ಏನಿದೆಯೋ ಅದನ್ನು ಖಾಸಗಿ ಕಾರ್ಖಾನೆಗಳು ಅನುಸರಿಸುತ್ತಿಲ್ಲ. ಇದಕ್ಕಾಗಿ ಒಂದು ತನಿಖಾ ಸಮಿತಿಯನ್ನು ರಚನೆ ಮಾಡಲು ಸರ್ಕಾರ ಸಿದ್ಧವಾಗಬೇಕು. ಈ ಸಮಿತಿಗೆ ಸರ್ಕಾರದ ಪ್ರತಿನಿಧಿಗಳು, ಆಡಳಿತ ವರ್ಗದ ಪ್ರತಿನಿಧಿಗಳು ಹಾಗೂ ನೌಕರ ಸಂಘದ ಪ್ರತಿನಿಧಿಗಳನ್ನು ನೇಮಕ ಮಾಡಬೇಕು. ಇದಕ್ಕೆ ಸರ್ಕಾರ ಸಿದ್ಧವಿದೆಯೇ? ಎಂಬ ಪ್ರಶ್ನೆಯನ್ನು ಸದನದಲ್ಲಿ ಸಿದ್ಧಲಿಂಗಯ್ಯನವರು ಎತ್ತುತ್ತಾರೆ.

ಖಾಸಗಿ ಗುತ್ತಿಗೆದಾರ ಪದ್ಧತಿಯು 1971ರಲ್ಲಿ ರದ್ದಾಗಿದ್ದರೂ ಅದನ್ನು ಏಕೆ ಮುಂದುವರೆಸಿಕೊಂಡು ಹೋಗುತ್ತಿದ್ದೀರಿ? ಮಾಲೀಕರಿಗೂ ಕಾರ್ಮಿಕರಿಗೂ ನಡೆಯುವ ವಿವಾದಗಳನ್ನು ಪರಿಹರಿಸಲು ಕಾರ್ಮಿಕ ಇಲಾಖೆ ಇದೆ. ಆದರೆ, ಪೊಲೀಸ್ ಇಲಾಖೆಯು ಈ ವಿವಾದಗಳಲ್ಲಿ ಮಾಲೀಕರ ಪರವಾಗಿ ನಿಂತು, ಅವರಿಗೆ ರಕ್ಷಣೆ ಕೊಡುತ್ತಿದೆ. ಇದು ಸರಿಯೇ? ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುತ್ತೀರಾ? ಕಾರ್ಖಾನೆಗಳಲ್ಲಿರುವ ಮಾಲೀಕರು ಹಾಗೂ ಕಾರ್ಮಿಕರು ಹೆಚ್ಚು ಹೊರನಾಡಿನವರೇ ಆಗಿದ್ದಾರೆ. ಆದರೆ ನೆಲ, ಜಲ, ವಿದ್ಯುತ್ ಕನ್ನಡ ಜನರದ್ದು. ಈ ಅನ್ಯಾಯವನ್ನು ತಡೆಗಟ್ಟುವಿರಾ? ಶೇಕಡಾ 90ರಷ್ಟು ಕನ್ನಡಿಗ ಜನರನ್ನು ನೇಮಕ ಮಾಡಿಕೊಳ್ಳುವಿರಾ? ಎಂಬ ಇತ್ಯಾದಿ ಪ್ರಶ್ನೆಗಳನ್ನು ಕೇಳುವ ಮೂಲಕ ಸಿದ್ಧಲಿಂಗಯ್ಯನವರು ಕಾರ್ಮಿಕರ, ನಮ್ಮ ಕನ್ನಡಿಗರ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಅದಕ್ಕೆ ಸ್ಪಂದಿಸಿದ ಸರ್ಕಾರ ಕಾರ್ಮಿಕರ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಾನೂನಿನ ಮೂಲಕ ಕೊಡಲು ಪ್ರಯತ್ನಿಸಿದೆ.

ಕಾರ್ಮಿಕ ಸಮಸ್ಯೆಗಳನ್ನು ವಿವರಿಸುವುದರ ಮೂಲಕ ಪ್ರಜಾಪ್ರಭುತ್ವದ ನೈಜ ವಿಶ್ಲೇಷಣೆಯನ್ನು ಮಾಡಲು ಸಿದ್ಧಲಿಂಗಯ್ಯನವರು ದಿನಾಂಕ 11–03–1991ರ ಸದನ ಸಂವಾದದಲ್ಲಿ ಪ್ರಯತ್ನಿಸಿದ್ದಾರೆ. ಪ್ರಜಾಪ್ರಭುತ್ವದ ಆಶಯಗಳಾದ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಇತ್ಯಾದಿಗಳನ್ನು ಕುರಿತು ಮಾತನಾಡಿದ್ದಾರೆ.

ದಿನಾಂಕ 26–09–1991ರಂದು, ಸದನದಲ್ಲಿ ಸಿದ್ಧಲಿಂಗಯ್ಯನವರು ಪೌರಕಾರ್ಮಿಕರ ಬವಣೆಯ ಬಗ್ಗೆ ಮಾತನಾಡುತ್ತಾರೆ. ನಮ್ಮ ರಾಜ್ಯದ ಮಹಾನಗರ ಪಾಲಿಕೆಗಳು, ನಗರಸಭೆ, ಮಂಡಲ ಪಂಚಾಯಿತಿಗಳು, ನಗರಾಭಿವೃದ್ಧಿ ನೈರ್ಮಲ್ಯ ಮಂಡಲಿಗಳಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚಿನ ಪೌರ ಕಾರ್ಮಿಕರು ದುಡಿಯುತ್ತಿದ್ದಾರೆ. ಅವರು ಅನೇಕ ಸಮಸ್ಯೆಗಳಿಗೆ ಸಿಲುಕಿ ನರಳುತ್ತಿದ್ದಾರೆ. ಇದನ್ನು ಬಗೆಹರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಮಹಾತ್ಮ ಗಾಂಧೀಜಿಯವರು ಇವರನ್ನು ತುಂಬಾ ಪ್ರೀತಿಸುತ್ತಿದ್ದರು. ಅವರು ಒಂದು ಮಾತನ್ನು ಹೇಳಿದರು, "ನನ್ನ ಕನಸಿನ ಭಾರತದಲ್ಲಿ ಬಂಗಿಗೂ, ರಾಷ್ಟ್ರಪತಿಗೂ ಯಾವುದೇ ಅಂತರ ಇರಬಾರದು." ಇದು ನನ್ನ ಆಸೆ ಎಂಬ ಮಾತು ಗಾಂಧೀಜಿ ಅವರದ್ದು. ಆದರೆ ಇಂದು ಅಂತರ ಹೆಚ್ಚಾಗಿಯೇ ಇದೆ ಹೊರತು ಕಡಿಮೆ ಆಗಿಲ್ಲ. ಪೌರಕಾರ್ಮಿಕರು ಎಂದರೆ ಸರ್ಕಾರಕ್ಕೆ ಏಕೆ ತಿರಸ್ಕಾರ? ಸರ್ಕಾರದ ಪ್ರೀತಿಯಿಂದ ಈ ಪೌರಕಾರ್ಮಿಕರು ವಂಚಿತರಾಗಿದ್ದಾರೆ. ಈ ತಿರಸ್ಕಾರದ ಭಾವನೆ ಸರ್ಕಾರಕ್ಕೆ ಬರಲು ಕಾರಣವೇನು? ಎಂಬ ಪ್ರಶ್ನೆಗಳನ್ನು ಸಿದ್ಧಲಿಂಗಯ್ಯನವರು ಕೇಳುತ್ತಾರೆ. ಈ ವಿಷಯವಾಗಿ ಅವರು ಮಹಾತ್ಮಾ ಗಾಂಧೀಜಿ ಅವರನ್ನು ನೆನೆಸಿಕೊಳ್ಳುವುದಷ್ಟೇ ಅಲ್ಲದೇ, ರಾಷ್ಟ್ರಕವಿ ಕುವೆಂಪು ಅವರನ್ನು ನೆನಪು ಮಾಡಿಕೊಳ್ಳುತ್ತಾರೆ. ಅಷ್ಟೇ ಅಲ್ಲದೇ, ಕುವೆಂಪು ಅವರು ಬರೆದ 'ಜಲಗಾರ' ನಾಟಕವನ್ನು ಅಂದಿನ ಸದನದಲ್ಲಿ ಸಿದ್ಧಲಿಂಗಯ್ಯನವರು ವಿವರಿಸುತ್ತಾರೆ. ರಾಷ್ಟ್ರಕವಿಯ ಕಣ್ಣಿಗೆ 'ಜಲಗಾರ' ಕಂಡಂದ್ದು ಪರಮಾತ್ಮನ ರೂಪದಲ್ಲಿ ಜಲಗಾರ ಮತ್ತು ಶಿವ ಇಬ್ಬರೂ ಬೇರೆಯಲ್ಲ. ಆದ್ದರಿಂದ ಪೌರಕಾರ್ಮಿಕರನ್ನು ನಮ್ಮ ಕವಿಗಳು ಪರಮಾತ್ಮನನ್ನಾಗಿಸಿ ಸ್ತುತಿ ಮಾಡಿದ್ದಾರೆ. ಆದರೆ, ನಮ್ಮ ಸರ್ಕಾರ ಮಾತ್ರ ಈ ಪೌರಕಾರ್ಮಿಕರ ಬಗ್ಗೆ ಕನಿಷ್ಠ ಭಾವನೆಯನ್ನು ತಾಳಿದೆ. ಅವರ ಸಮಸ್ಯೆಗಳ ಬಗ್ಗೆ ಏಕೆ ಸರ್ಕಾರ ಚಿಂತಿಸುತ್ತಿಲ್ಲ? ಎನ್ನುವ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸರ್ಕಾರದ ಕಣ್ಣು ತೆರೆಸುವಲ್ಲಿ ಯಶಸ್ವಿಯಾಗಿದ್ದಾರೆ. ಪೌರಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರಕ್ಕೆ ಕೆಲವು ಸಲಹೆ ಸೂಚನೆಗಳನ್ನು ಸಿದ್ಧಲಿಂಗಯ್ಯನವರು ಕೊಡುತ್ತಾರೆ. ಅವುಗಳೂ ಯಾವುವೆಂದರೆ

**1. ಜನಸಂಖ್ಯೆಗೆ ಅನುಗುಣವಾಗಿ ಇಷ್ಟು ಜನ ಪೌರಕಾರ್ಮಿಕರು ಇರಬೇಕೆಂದು ಸರ್ಕಾರ ನಿಗದಿಪಡಿಸಬೇಕು.**

**2. ಕಸಗುಡಿಸುವ ಜನರಿಗೆ ದೂಳು ಮೂಗಿಗೆ ಹೋಗದ ಹಾಗೆ ಮೂಗಿಗೆ ಬಟ್ಟೆ ಕಟ್ಟಿಕೊಂಡು ಪೌರಕಾರ್ಮಿಕರು ಕಸ ಗುಡಿಸಬೇಕು. ಆ ರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡಬೇಕು.**

**3. ಚರಂಡಿಗಳಲ್ಲಿ ಇಳಿಯುವ ಕೆಲಸಗಾರರಿಗೆ, ಅಪಾಯಕಾರಿಯಾದ ಕೆಲಸಗಳನ್ನು ಮಾಡುವ ಇವರಿಗೆ ರಬ್ಬರ್ ಸಮವಸ್ತ್ರ ಹಾಗೂ ಮುಖ ರಕ್ಷಣೆ ಉಪಕರಣಗಳನ್ನು ಕೊಟ್ಟು ಅವರ ಜೀವವನ್ನು ರಕ್ಷಿಸಬೇಕು.**

**4. ಕಸವನ್ನು ಲಾರಿಗಳಿಗೆ ಹಾಕುವ ಮತ್ತು ಇಳಿಸುವ ಕೆಲಸ ಮಾಡುವ ನೌಕರರಿಗೆ ಕೈಗಳಿಗೆ ಚರ್ಮದ ಕೈಚೀಲ ಕೊಡಬೇಕು.**

**5. ಅವರ ಕಾಲುಗಳಿಗೆ ಉದ್ದನೆಯ ಗಮ್ ಬೂಟುಗಳನ್ನು ಸರ್ಕಾರ ವಿತರಿಸಬೇಕು.**

ಎಂಬಿತ್ಯಾದಿ ಸಲಹೆಗಳನ್ನು ಸರ್ಕಾರಕ್ಕೆ ಸಿದ್ಧಲಿಂಗಯ್ಯನವರು ಕೊಡುತ್ತಾರೆ. ಇಲ್ಲದಿದ್ದರೆ, ಈ ಪೌರಕಾರ್ಮಿಕರು ಕಸದಲ್ಲಿಯೇ ನಿಂತು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆ. ಇದರಿಂದ ಅವರ ಆಯಸ್ಸು ಮೂವತ್ತರಿಂದ ಮೂವತ್ತೈದು ವರ್ಷಗಳಿಗೆ ಸೀಮಿತವಾಗುತ್ತದೆ ಎಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಪೌರಕಾರ್ಮಿಕರ ಪರವಾಗಿ ಕೊಡುತ್ತಾರೆ.

ಸರ್ಕಾರದಿಂದ ಈ ಪೌರಕಾರ್ಮಿಕರು ವಂಚಿತರಾಗಿರುವುದಲ್ಲದೇ ಸಮಾಜದಿಂದಲೂ ಇವರು ವಂಚಿತರಾಗಿದ್ದಾರೆ. ಇವರ ಸ್ಥಾನಮಾನ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಹೀಗಿದ್ದರೂ ಈ ಇಲಾಖೆಗೆ ಜನ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆ. ಯಾವುದೇ ರಕ್ಷಣೆ, ಸೌಲಭ್ಯಗಳಿಲ್ಲದೇ, ಕ್ಯಾನ್ಸರ್, ಕ್ಷಯದಂತಹ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಎಲ್ಲಾ ದೃಷ್ಟಿಯಲ್ಲೂ ಇವರು ಶೋಷಿತರೇ ಆಗಿದ್ದಾರೆ. ಈ ಪೌರಕಾರ್ಮಿಕರ ಗುಡಿಸುವ ಪೊರಕೆ, ಸನಿಕೆ, ಮಂಕರಿಗಳನ್ನೆಲ್ಲಾ ನುಂಗಿ ಮೆರೆಯುವ ಅಧಿಕಾರಿಗಳು ಇದ್ದಾರೆ. ಇದೊಂದು ಹೃದಯ ಹಿಂಡುವ ಸಂಗತಿಯಾಗಿದೆ. ಪೌರಕಾರ್ಮಿಕರ ಅಧ್ಯಯನಕ್ಕೆಂದು ನೇಮಕವಾಗಿದ್ದ, ಐ.ಪಿ.ಡಿ. ಸಾಲಪ್ಪ ಸಮಿತಿಯು 1976ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತು. ಅದರ ಪ್ರಕಾರ 58 ಶಿಫಾರಸ್ಸುಗಳನ್ನು ಸರ್ಕಾರಕ್ಕೆ ತಿಳಿಸಿತು. ಇದರಲ್ಲಿ ಸರ್ಕಾರ ಒಪ್ಪಿಕೊಂಡಿದ್ದು 36 ಶಿಫಾರಸ್ಸುಗಳನ್ನು ಮಾತ್ರ. ಆದರೆ, ಅದನ್ನು ಸರ್ಕಾರವು ಜಾರಿಗೆ ತರುವಲ್ಲಿ ವಿಫಲವಾಗಿದೆ. ಈ ಕಾರ್ಮಿಕರಿಗಾಗಿ ಮೀಸಲಿಟ್ಟ ಶೇಕಡ 18ರಷ್ಟು ಹಣವು ಇದಕ್ಕೆ ವಿನಿಯೋಗಿಸಿಲ್ಲ. ಬದಲಿಗೆ ಆ ಹಣವನ್ನು ಎಂ.ಜಿ. ರಸ್ತೆಗೆ ಟಾರ್ ಹಾಕಿಸಲು ವಿನಿಯೋಗಿಸಲಾಯಿತು ಎಂಬ ಅಂಶವನ್ನು ಆ ಸದನದಲ್ಲಿ ವಿವರಿಸುವ ಮೂಲಕ ಸುಮಾರು ನಲವತ್ತು ವರ್ಷಗಳಿಂದ ಕಡೆಗಣಿಸಲ್ಪಟ್ಟಿದ್ದ ವಿಷಯವನ್ನು ಸಿದ್ಧಲಿಂಗಯ್ಯನವರು ಪ್ರಸ್ತಾಪಿಸಿದರು.

1990–91ರ ಸಾಲಿನ ಬಜೆಟ್ ಬಗ್ಗೆ ದಿನಾಂಕ 23–03–1990ರಂದು ಸದನದಲ್ಲಿ ಸಿದ್ಧಲಿಂಗಯ್ಯನವರು ಚರ್ಚಿಸುತ್ತಾರೆ. ಈ ಚರ್ಚೆಯು ಸಾರ್ವಜನಿಕ ಸಮಸ್ಯೆಗಳನ್ನು ಒಳಗೊಂಡ ಚರ್ಚೆಯಾಗಿದೆ.

**ಉಪಸಂಹಾರ**

ಹೀಗೆ ನಾಡೋಜ ಸಿದ್ಧಲಿಂಗಯ್ಯನವರು ಶಾಸನಸಭೆಯಲ್ಲಿ ದಮನಿತರ ಪರವಾಗಿ ಬಹುದೊಡ್ಡ ವಾಗ್ವಾದಗಳನ್ನು ಹಾಗೂ ಸಂವಾದಗಳನ್ನು ನಡೆಸಿ ಸರ್ಕಾರದ ಗಮನ ಸೆಳೆದಿದ್ದಾರೆ. ಅವರು ಮಂಡಿಸಿದ ಹಲವು ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕಾನೂನುಗಳನ್ನು ರೂಪಿಸಿದೆ. ವಿಧಾನ ಪರಿಷತ್ತಿನ ಸದಸ್ಯನಾಗುವುದು ಕೇವಲ ತನಗಾಗಿ ಅಲ್ಲ. ತನ್ನನ್ನು ನಂಬಿರುವ, ತನ್ನ ಮೇಲೆ ವಿಶ್ವಾಸವಿಟ್ಟಿರುವ ಎಲ್ಲರಿಗಾಗಿ ಎಂಬುದು ಸಿದ್ಧಲಿಂಗಯ್ಯನವರ ಸಿದ್ಧಾಂತವಾಗಿತ್ತು. ಆ ಸಿದ್ಧಾಂತಕ್ಕೆ ಕೊಂಚವೂ ಲೋಪಬರದ ಹಾಗೆ ಸಿದ್ಧಲಿಂಗಯ್ಯ ನಡೆದುಕೊಂಡಿರುವುದನ್ನು ಅವರ ಸದನ ಸಂವಾದಗಳ ಮೂಲಕ ನಾವು ಗ್ರಹಿಸಬಹುದಾಗಿದೆ. ಈ ಮೊದಲೇ ಪ್ರಸ್ತಾಪಿಸಿದಂತೆ ಅನಧಿಕೃತ ಶಾಸಕರೆಂದು ಕವಿಗಳನ್ನು ಕರೆಯಲಾಗುತ್ತದೆ. ವಿದ್ಯಾವಂತರಾಗಿ, ಬುದ್ಧಿವಂತರಾಗಿ; ಸಾಹಿತ್ಯ, ಸಂಸ್ಕೃತಿ, ಇತಿಹಾಸ ಹಾಗೂ ಸದ್ಯದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಗಂಭೀರವಾಗಿ ಅಧ್ಯಯನ ಮಾಡಿದ್ದ ಕವಿ ಸಿದ್ಧಲಿಂಗಯ್ಯನವರು ಅಧಿಕೃತ ಶಾಸಕರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿರುವುದು ಸದನಗಳ ದಾಖಲೆಗಳ ಮೂಲಕ ನಾವು ಅರ್ಥಮಾಡಿಕೊಳ್ಳಬಹುದಾಗಿದೆ.